**ದಿನಾಂಕಃ 23-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ**

ನನ್ನ ಮದುವೆಯಾಗಿ 24-25 ವರ್ಷಗಳು ಆಗಿರುತ್ತವೆ. ಆಗ ನನಗೆ ವಯಸ್ಸು 17-18 ವರ್ಷ ಇರಬಹುದು. ಈಗ ನನ್ನ ವಯಸ್ಸು 40 ವರ್ಷ ದಾಟಿರುತ್ತದೆ. ನನ್ನ ಮಾವನ ಹೆಸರು ಅಮರಪ್ಪಗೌಡ ಇರುತ್ತದೆ. ಸದರಿಯವರಿಗೆ ಬಾಳನಗೌಡ ಮತ್ತು ಕೃಷ್ಣಪ್ಪಗೌಡ ಎನ್ನುವ ಸಹೋದರರು ಇರುತ್ತಾರೆ. ನಾನು ಕೃಷ್ಣಪ್ಪಗೌಡ ಮತ್ತು ಅಮರಪ್ಪಗೌಡನನ್ನು ನೋಡಿರುತ್ತೇನೆ. ಆದರೆ ಬಾಳನಗೌಡನನ್ನು ನೋಡಿರುವುದಿಲ್ಲ. ಸದರಿ ಮೂವರ ಪೈಕಿ ಅವರುಪ್ಪಗೌಡ ದೊಡ್ಡವನು ಇರುತ್ತಾನೆ. ಆತನ ನಂತರ ಕೃಷ್ಣಪ್ಪಗೌಡ, ನಂತರ ಬಾಳನಗೌಡ ಇರಬಹುದು. ಸದರಿಯವರು ನನ್ನ ಮಾವ ಅಮರಪ್ಪಗೌಡ ಮತ್ತು ಆತನ ಇಬ್ಬರು ಸಹೋದರರು ಬೇರೆ ಬೇರೆ ಯಾಗಿರುತ್ತಾರೆ. ಎಷ್ಟು ವರ್ಷಗಳ ಹಿಂದೆ ಬೇರೆ ಆಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

**02.** ಅಮರಪ್ಪಗೌಡನಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಕೃಷ್ಣಪ್ಪಗೌಡನಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ಬಾಳನಗೌಡನ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ಬಾಳನಗೌಡನಿಗ ಮದುವೆ ಆಗಿದೆಯೊ ಅಥವಾ ಇಲ್ಲವೋ ಎನ್ನುವ ಬಗ್ಗೆ ನಾನು ಕೇಳಿರುವುದಿಲ್ಲ. ನಾನು 1 ನೇ ಪ್ರತಿವಾದಿಯ ಮತ್ತು ಅವಳ ಮಕ್ಕಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿರುವುದಿಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯು ತಹಶೀಲ್ದಾರ ಕಚೇರಿಯಲ್ಲಿ ಪ್ರಕರಣ ಮಾಡಿದಾಗ ಅವರ ಬಗ್ಗೆ ಗೊತ್ತಾಗಿರುತ್ತದೆ. ನಾನು ಮತ್ತು 2 ನೇ ಶಿವಪ್ಪಗೌಡ ಸೇರಿ ದಾವೆ ದಾಖಲಿಸಿರುತ್ತೇವೆ. ಈ ದಾವೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಾನು ಈ ದಾವೆಯಲ್ಲಿ ಒಂದು ಡಿಕ್ರಿಯ ಬಗ್ಗೆ ಬರೆದಿರುತ್ತೀರಾ ಎಂದು

ಕೇಳಲು ಸಾಕ್ಷಿಯು ಅದರ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಅಸಲು ದಾವಾ ನಂ.51/2005 ರ ಬಗ್ಗೆ ನಾನು ಮಾಹಿತಿ ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಹುಣಸಗಿ ಪ್ರಕರಣದ ಬಗ್ಗೆ ಮಾಹಿತಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾಳೆ.

**03.** ನಮ್ಮ ಮಾವ ಅಮರಪ್ಪಗೌಡನ ಹೆಸರಿನಲ್ಲಿ ಎಷ್ಟು ಜಮೀನುಗಳು ಇರುತ್ತವೆ ಎಂದು ಕೇಳಲು ಸಾಕ್ಷಿಯು ಸರ್ವೆ ನಂ.36 ಮತ್ತು 38 ಜಮೀನುಗಳು ಸೇರಿ ಒಟ್ಟು 16 ಎಕರೆ ಜಮೀನು ಇರಬಹುದು ಎಂದು ನುಡಿಯುತ್ತಾರೆ. ನಮ್ಮ ಮಾವನ ಹೆಸರಿನಲ್ಲಿ ಸದರಿ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇರುತ್ತವೆ. ಕೃಷ್ಣಪ್ಪಗೌಡನ ಹೆಸರಿನಲ್ಲಿ ಯಾವ ಯಾವ ಆಸ್ತಿಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಅದೇರೀತಿ ಬಾಳನಗೌಡನ ಹೆಸರಿನಲ್ಲಿ ಯಾವ ಯಾವ ಆಸ್ತಿಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಯು ಅಮರಪ್ಪಗೌಡನ ಹೆಸರಿನಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆಗೆ ಇದ್ದವು ಎಂದು ನನಗೆ ಗೊತ್ತಿರುವುದಿಲ್ಲ. ಮೂವರಿಗೆ ಯಾವ ಯಾವ ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮೂವರ ನಡುವೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿರುವುದಿಲ್ಲ.

**04.** ದಾವಾ ಆಸ್ತಿಗಳ ಪಹಣಿಯನ್ನು ನೋಡಿರುತ್ತೇನೆ. ಸರ್ವೆ ನಂ.36 ಮತ್ತು 38 ಜಮೀನುಗಳು ನನ್ನ ಹಸರಿನಲ್ಲಿ ಇರುತ್ತವೆ. ಸರ್ವೆ ನಂ.38 ರಲ್ಲಿ ಎಷ್ಟು ಎಕರೆ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಂ.38 ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.36 ಒಂದೇ ನನ್ನ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂ.36 ನನ್ನ ಹೆಸರಿನಲ್ಲಿ ದಾಖಲಾಗುವುದಕ್ಕಿಂತ ಮುಂಚೆ ಬಸನಗೌಡನ ಹೆಸರಿನಲ್ಲಿ ಇತ್ತು. ಅದಕ್ಕಿಂತ

ಪೂರ್ವದಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಬಸನಗೌಡನ ಹೆಸರಿನಲ್ಲಿ ದಾಖಲಾಗುವುದಕ್ಕಿಂತ ಮುಂಚೆ ಯಾರ ಹೆಸರಿನಲ್ಲಿ ಇತ್ತು ಎಂದು ನಾನು ಕೇಳಿ ತಿಳಿದುಕೊಂಡಿಲ್ಲ.

**05.** ಬಸನಗೌಡನಿಂದ ಹನಮಗೌಡನ ಹೆಸರಿಗೆ ಯಾವ ಆಧಾರದ ಮೇರೆಗೆ ಮತ್ತು ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಹನಮಗೌಡನ ಹೆಸರಿನಿಂದ ನನ್ನ ಹೆಸರಿಗೆ ಬರಬೇಕಾದರೆ ಯಾವುದೇ ದಾಖಲೆ ಮುಖಾಂತರ ಬಂದಿರುವುದಿಲ್ಲ, ನನ್ನ ಗಂಡ ಜೀವಂತ ಇದ್ದಾಗ ನನ್ನ ಹೆಸರಿನಲ್ಲಿ ಹಚ್ಚಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡನಿಂದ ನನಗೆ ದಾನಪತ್ರವಾಗಲಿ, ಖರೀದಿ ಪತ್ರವಾಗಲಿ, ಹಕ್ಕು ಬಿಟ್ಟುಕೊಟ್ಟ ಪತ್ರವಾಗಲಿ, ವಾರಸನಾತೆಯಿಂದ ಆಗಿರುವುದಿಲ್ಲ.

**06.** ಸರ್ವೆ ನಂ.36 ಮೊದಲು ಬಾಳನಗೌಡ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಬಾಳನಗೌಡ ತೀರಿಕೊಂಡ ನಂತರ ಆತನ ಹೆಂಡತಿಯಾದ ದ್ಯಾಮವ್ವನ ಹೆಸರಿನಲ್ಲಿ ವರ್ಗಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದ್ಯಾಮವ್ವನ ಗಂಡ ತೀರಿಕೊಂಡ ಸಮಯದಲ್ಲಿ ದ್ಯಾಮವ್ವನ ಇಬ್ಬರು ಮಕ್ಕಳಾದ 2 ಮತ್ತು 3 ನೇ ಪ್ರತಿವಾದಿಯರು ಚಿಕ್ಕವರು ಇದ್ದರು ಎಂದರೆ ಸರಿ. ದ್ಯಾಮವ್ವಳು ಅವಳ ಗಂಡ ತೀರಿಕೊಂಡ ನಂತರ ಅವಳ ತವರುಮನೆಯಾದ ಹಾಲಭಾವಿಯಲ್ಲಿ ವಾಸವಾಗಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. ಬಾಳನಗೌಡನಿಗೆ ಮಕ್ಕಳು ಇರುವುದಿಲ್ಲ ಎಂದು ಮತ್ತು ಹೆಂಡತಿ ತೀರಿಕೊಂಡಿರುತ್ತಾಳೆ ಎಂದು ಸುಳ್ಳು ಹೇಳಿ ದೊಡ್ಡಬಸನಗೌಡ ಮತ್ತು ಸಣ್ಣಬಸನಗೌಡ ಇಬ್ಬರ ಹೆಸರಿನಲ್ಲಿ ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**07.** ಸಣ್ಣಬಸನಗೌಡ ನನ್ನ ಗಂಡನ ಅಣ್ಣ ಇರುತ್ತಾನೆ. ದೊಡ್ಡಬಸನಗೌಡ ಈತನು ಕೃಷ್ಣಪ್ಪಗೌಡನ ಮಗ ಇರುತ್ತಾನೆ. ದಾವಾ ಆಸ್ತಿಯಗಳು ಮತ್ತು ಇನ್ನೊಂದು ಆಸ್ತಿಯನ್ನು ಕೃಷ್ಣಪ್ಪಗೌಡನ ಮಗ ದೊಡ್ಡಬಸನಗೌಡ ಮತ್ತು ಅಮರಪ್ಪಗೌಡನ ಮಗ ಸಣ್ಣಬಸನಗೌಡ ಇಬ್ಬರ ಹೆಸರಿನಲ್ಲಿ ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅದಕ್ಕೆ ಸಂಬಂಧಿಸಿದ ಮುಟೇಷನನನ್ನು ನಾನು ನೋಡಿರುತ್ತೇನೆ. ಸದರಿ ಮುಟೇಷನಷನಲ್ಲಿ ಬಾಳನಗೌಡನ ಹೆಂಡತಿ ತೀರಿಕೊಂಡಿರುತ್ತಾಳೆ ಮತ್ತು ಆತನಿಗೆ ಯಾರು ವಾರಸುದಾರರು ಇಲ್ಲವೆಂದು ಮತ್ತು ನಾವೇ ವಾರಸುದಾರರೆಂದು ದಾಖಲಿಸಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ಸಂಗತಿ ಗೊತ್ತಾದ ನಂತರ ಬಾಳನಗೌಡದ ಹೆಂಡತಿ ಮತ್ತು ಮಕ್ಕಳಾದ 1 ರಿಂದ 3 ನೇ ಪ್ರತಿವಾದಿಯರು ಸದರಿಯವರ ವಿರುದ್ದ ಅಸಲು ದಾವಾ ನಂ.51/2005 ನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಕೃಷ್ಣಪ್ಪಗೌಡನ, ಅಮರಪ್ಪಗೌಡ, ಸಣ್ಣಬಸನಗೌಡ, ದೊಡ್ಡಬಸನಗೌಡ ಇವರು ಪಕ್ಷಗಾರರು ಇರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ನನ ಗಂಡ ಹನಮನಗೌಡ 4 ನೇ ಪ್ರತಿವಾದಿ ಆಗಿದ್ದನು ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ ಸದರಿ ದಾವೆಯು ದಿನಾಂಕ 09-08-2006 ರಲ್ಲಿ ರಾಜೀಯಲ್ಲಿ ಮುಕ್ತಾಯಗೊಂಡಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಡಿಕ್ರಿ ಪ್ರಕಾರ ಬಾಳನಗೌಡನ ಹೆಸರಿನಲ್ಲಿ ಇರುವ ಆಸ್ತಿಗಳು ಆತನ ಹೆಂಡತಿ ಮಕ್ಕಳ ಹೆಸರಿನಲ್ಲಿ ದಾಖಲಾಗಬೇಕು ಎಂದು ಆದೇಶಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆ ದಾವೆಯಲ್ಲಿ ಬಾಳನಗೌಡನ ಹೆಸರಿನಲ್ಲಿ ಒಟ್ಟು 4 ಜಮಿನುಗಳು ಇದ್ದವು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ರಾಜೀ ಅರ್ಜಿ ಪ್ರಕಾರ 7 ಎಕರೆ 7 ಗುಂಟೆ ಮತ್ತು 25 ಗುಂಟೆ ಜಮೀನನ್ನು ಕೃಷ್ಣಪ್ಪಗೌಡನಿಗೆ ಬಿಟ್ಟುಕೊಡಬೇಕೆಂದು ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.36/ಅ 06 ಎಕರೆ 7 ಗುಂಟೆ ಮತ್ತು

01/ಆ ಕ್ಷೇತ್ರ 25 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಇದೇ ನ್ಯಾಯಾಲಯದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ 1 ರಿಂದ 3 ನೇ ಪ್ರತಿವಾದಿಗೆ ಸೇರಿದ ಆಸ್ತಿಗಳೆಂದು ಘೋಷಣೆ ಮಾಡಿರುತ್ತೆದೆ ಎಂದರೆ ನನಗೆ ಗೂತ್ತಿರುವುದಿಲ್ಲ.

**08.** 1 ರಿಂದ 3 ನೇ ಪ್ರತಿವಾದಿಯರು ಮತ್ತು ಇತರ ವ್ಯಕ್ತಿಗಳ ಮೇಲೆ ಒಟ್ಟು 3-4 ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿರುತ್ತೇವೆ ಎಂದರೆ ನನಗೆ ಗೂತ್ತಿರುವುದಿಲ್ಲ. ದಾವೆಯಲ್ಲಿ ಆಸ್ತಿಗಳು ನನಗೆ ಹೇಗೆ ಬಂದವು ಎಂದು ತಿಳಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳು ಮೂಲತಃ ಯಾರ ಹೆಸರಿನಲ್ಲಿ ಇದ್ದವು ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿ ನಮ್ಮ ಮಾವನಾದ ಅಮರಪ್ಪಗೌಡನ ಹೆಸರಿನಲ್ಲಿ ಇದ್ದವು ಅಂತ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸಣ್ಣಬಸನಗೌಡನು ನಮ್ಮ ಮಾವನನಿಗೆ ಬಿಟ್ಟುಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ನನಗೆ ನ್ಯಾಯಾಲಯದಲ್ಲಿ ಆದಂತಹ ಡಿಕ್ರಿ ಬಗ್ಗೆ ಏನು ಗೊತ್ತಿಲ್ಲ. 2 ನೇ ವಾದಿಯಾದ ಶಿವಪ್ಪಗೌಡನಿಗೆ ಎಲ್ಲಾ ಮಾಹಿತಿ ಇರುತ್ತದೆ. 2006 ರಲ್ಲಿ ಆದಂತಹ ಮುಟೇಷನ್ ಬಗ್ಗೆ ಮತ್ತು ರಾಜೀ ಡಿಕ್ರಿ ಬಗ್ಗೆ ಸದರಿಯವರಿಗೆ ಮಾಹಿತಿ ಇರುತ್ತದೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.